(೧೮)

# ಸಹಾಯಕ ಆಯುಕ್ತರವರ ನ್ಯಾಯಾಲಯ, ಹೊಸಪೇಟೆ.

ಎ.ವಿಲೇ.ನಂ.ಕಂ.ಪಹಣಿ:ಅಪೀಲು:254/2012-13

ದಿನಾಂಕ:07.04.2016.

**ಉಪಸ್ಥಿತರು: ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ**
**ಸಹಾಯಕ ಆಯುಕ್ತರು, ಹೊಸಪೇಟೆ**

*****

**ವಾದಿಗಳು: ಶ್ರೀ/ ಶ್ರೀಮತಿ**

1. ಬಿ.ಪ್ರೇಮಾನಂದ ತಂದೆ ದಿ|| ಗಿರಿಯಪ್ಪ,
ವಾಸ: ಹನುಮಗೊಂಡನಹಳ್ಳಿ ಗ್ರಾಮ,
ಹಗರಿಬೊಮ್ಮನಹಳ್ಳಿ ತಾಲೂಕು, ಬಳ್ಳಾರಿ ಜಿಲ್ಲೆ.

**[ಶ್ರೀ ಶ್ರೀನಿವಾಸ.ಎಂ.ಎಸ್., ವಕೀಲರು,**
**ಹಗರಿಬೊಮ್ಮನಹಳ್ಳಿ.]**

**ಪ್ರತಿವಾದಿಗಳು: ಶ್ರೀ/ ಶ್ರೀಮತಿ**

1] ಗಂಗಮ್ಮ ಗಂಡ ಗಿರಿಶಪ್ಪ,
2] ಹೇಮಕ್ಕ ಗಂಡ ಡಾಲಿಂಗಪ್ಪ,
3] ಸಂಗಪ್ಪ ತಂದೆ ಚೊಕ್ಕಪ್ಪ ಇವರ ಪೋತಿ ವಾರಸುದಾರರು
3ಎ] ನಿಂಗಪ್ಪ ತಂದೆ ಸಂಗಪ್ಪ,
3ಬಿ] ಮಹಾದೇವಕ್ಕ ತಂದೆ ಸಂಗಪ್ಪ,
3ಸಿ] ಮಹಾದೇವಪ್ಪ ತಂದೆ ಸಂಗಪ್ಪ,
3ಡಿ]ಗಂಗಮ್ಮ ತಂದೆ ಸಂಗಪ್ಪ,

**ಪ್ರತಿವಾದಿ 1 ರಿಂದ 3 ರವರ ವಾಸ:**
ಹನುಮಗೊಂಡನಹಳ್ಳಿ ಗ್ರಾಮ,
ಹಗರಿಬೊಮ್ಮನಹಳ್ಳಿ ತಾ||, ಬಳ್ಳಾರಿ ಜಿಲ್ಲೆ.

**[ಪ್ರತಿವಾದಿ-1 ರಿಂದ 3 ರವರ ಪರ ವಕೀಲರು ಶ್ರೀ ಎಸ್.ಚಂದ್ರಪ್ಪ, ವಕೀಲರು, ಹೊಸಪೇಟೆ.]**

4] ತಹಶೀಲ್ದಾರರು, ಹಗರಿಬೊಮ್ಮನಹಳ್ಳಿ.

**ವ್ಯಾಜ್ಯದಜಮೀನು:**

| ತಾಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| ಹಗರಿಬೊಮ್ಮನಹಳ್ಳಿ | ಹಂಪಸಾಗರ | ಹನುಮಗೊಂಡನಹಳ್ಳಿ | 45/ಸಿ | 03 ಎಕರೆ 92 ಸೆಂಟ್ಸ್ |

**ಪೀಠಿಕೆ:-**

ಹಗರಿಬೊಮ್ಮನಹಳ್ಳಿ ತಾಲೂಕು ಹಂಪಸಾಗರ ಹೋಬಳಿ ಹನುಮಗೊಂಡನಹಳ್ಳಿ ಗ್ರಾಮದ ಸ.ನಂ.45/ಸಿ ವಿಸ್ತೀರ್ಣ: 03 ಎಕರೆ 92 ಸೆಂಟ್ಸ್ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಹಂಪಸಾಗರಇವರ ಹಕ್ಕು ಬದಲಾವಣೆ ಆದೇಶ ಸಂಖ್ಯೆ:05/1997-98 ದಿನಾಂಕ:10.03.1998 ವನ್ನು ಪ್ರಶ್ನಿಸಿ ಕರ್ನಾಟಕ ಭೂಕಂದಾಯಕಾಯ್ದೆ 1964 ರ ಕಲಂ 136[2] ರಡಿಯಲ್ಲಿ ವಾದಿಗಳು ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

ವಾದಿಗಳು ಸಲ್ಲಿಸಿದ ಕಡತವನ್ನು ಪರಿಶೀಲಿಸಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:30.04.2013 ಕ್ಕೆ ನಿಗಧಿಪಡಿಸಿ ಉಭಯ ಪಕ್ಷಗಳಿಗೆ ನೋಟೀಸು ಮೂಲಕ ತಿಳಿಸಿ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ವಾದಿಗಳ ಪ್ರಕಾರ ಸದರಿ ವ್ಯಾಜ್ಯದ ಜಮೀನು ಮೂಲತ: ಶ್ರೀಮತಿ ಬೂದನೂರು ಹನುಮವ್ವ ಗಂಡ ದಿ|| ಕೊಟ್ರಪ್ಪ ಇವರ ಸ್ವಯಾರ್ಜಿತ ಆಸ್ತಿಯಾಗಿದ್ದು ಇವರು ನೋಂದಾಯಿತ ದಸ್ತಾವೇಜು ಸಂಖ್ಯೆ: 452/69-70 ದಿನಾಂಕ:12.05.1969 ರಂದು ರೂ.4,000/- ಗಳಿಗೆ ಕ್ರಯಕ್ಕೆ ಪಡೆದಿದ್ದು, ಇವರಿಗೆ ಸಂತಾನವಿಲ್ಲದಿರುವುದರಿಂದ ಸದರಿ ವ್ಯಾಜ್ಯದ ಜಮೀನನ್ನು ಗ್ರಾಮದ ಪ್ರಮುಖರ ಸಮಕ್ಷಮದಲ್ಲಿ ದಿನಾಂಕ:05.03.1987 ರಂದು ಮರಣ ಶಾಸನ/ ವಿಲ್ ದಸ್ತಾವೇಜು ಪ್ರಕಾರ ವಾದಿಗಳಿಗೆ ಬರೆದುಕೊಟ್ಟಿರುವುದಾಗಿ, ಆ ಪ್ರಕಾರವಾಗಿ ಹಕ್ಕು ಬದಲಾವಣೆ ಆದೇಶ ಸಂಖ್ಯೆ:05/1990-91 ದಿನಾಂಕ:19.04.1991 ರ ಪ್ರಕಾರ ವಾದಿಯ ಹೆಸರಿಗೆ

ಹಕ್ಕು ಬದಲಾವಣೆ ಆಗಿದ್ದು, ತದನಂತರದಲ್ಲಿ ಹಕ್ಕು ಬದಲಾವಣೆ ಆದೇಶ ಸಂಖ್ಯೆ:05/1997-98 ರ ಪ್ರಕಾರ ಪ್ರತಿವಾದಿಗಳ ಹೆಸರಿನಲ್ಲಿ ಸದರಿ ವ್ಯಾಜ್ಯದ ಜಮೀನನ್ನು ಸುಳ್ಳು ಪಾಲು ವಿಬಾಗದ ಪತ್ರದ ಪ್ರಕಾರ ಹಕ್ಕು ಬವದಲಾವಣೆ ಮಾಡಿದ್ದು, ಸದರಿ ಆದೇಶವು ಕಾನೂನು ಬಾಹಿರವಾಗಿದ್ದು, ಸದರಿ ವ್ಯಾಜ್ಯದ ಜಮೀನಿನಲ್ಲಿ ಪ್ರತಿವಾದಿಗಳಿಗೆ ಯಾವುದೇ ಹಕ್ಕು ಇರುವುದಿಲ್ಲವೆಂದು, ವಿಲ್ ಪತ್ರದ ಪ್ರಕಾರ ವಾದಿಗಳೇ ಸದರಿ ಜಮೀನಿನ ಮೇಲೆ ಹಕ್ಕು ಹೊಂದಿದ್ದು, ಪ್ರಶ್ನಿತ ಆದೇಶವನ್ನು ರದ್ದುಪಡಿಸಿ, ವಾದಿಯ ಹೆಸರಿಗೆ ಸದರಿ ವ್ಯಾಜ್ಯದ ಜಮೀನನ್ನು ಮುಂದುವರೆಸಲು ಮನವಿ ಮಾಡಿಕೊಂಡಿರುತ್ತಾರೆ.

**ಸದರಿ ವ್ಯಾಜ್ಯದ ಜಮೀನಿಗೆ ಸಂಬಂಧಿಸಿದಂತೆ ವಾದಿಗಳು ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಿರುತ್ತಾರೆ.**

1. ನೋಂದಾಯಿತವಲ್ಲದ ವಿಲ್ ದಸ್ತಾವೇಜು ದಿನಾಂಕ:05.03.1987ರ ಪ್ರತಿಯನ್ನು ಲಗತ್ತಿಸಿರುತ್ತಾರೆ.
2. ಹಕ್ಕು ಬದಲಾವಣೆ ಆದೇಶ ಸಂಖ್ಯೆ: 05/1990-91 ದಿನಾಂಕ:19.04.1991ರ ಪ್ರತಿಯನ್ನು ಲಗತ್ತಿಸಿರುತ್ತಾರೆ.
3. ಹಕ್ಕು ಬದಲಾವಣೆ ಆದೇಶ ಸಂಖ್ಯೆ:05/1997-98 ದಿನಾಂಕ:10.03.1998ರ ಪ್ರತಿಯನ್ನು ಲಗತ್ತಿಸಿರುತ್ತಾರೆ.
4. ಬೂದನೂರು ಚೊಕ್ಕಪ್ಪ ಇವರ ವಂಶವೃಕ್ಷವನ್ನು ಸಲ್ಲಿಸಿರುತ್ತಾರೆ.
5. 1968-69 ರಿಂದ 1997-98 ರ ವರೆಗಿನ ಕೈ ಬರಹ ಪಹಣಿಗಳನ್ನು ಲಗತ್ತಿಸಿದ್ದು, ಹಾಗೂ 2011-12 ರಗಣಕೀಕೃತ ಪಹಣಿ ಪ್ರತಿಯನ್ನು ಲಗತ್ತಿಸಿರುತ್ತಾರೆ.
6. ನೋಂದಾಯಿತವಲ್ಲದ ಪಾಲುವಿಭಾಗ ಪತ್ರದ ಪ್ರತಿಯನ್ನು ಲಗತ್ತಿಸಿರುತ್ತಾರೆ.
7. ಸದರಿ ವ್ಯಾಜ್ಯದ ಜಮೀನಿಗೆ ಸಂಬಂಧಿಸಿದಂತೆ ದಿನಾಂಕ:01.04.1960ರಿಂದ ದಿನಾಂಕ:31.12.1979 ರವರೆಗಿನ ಇ.ಸಿ.[ನಮೂನೆ-15] ಪ್ರತಿಯನ್ನು ಲಗತ್ತಿಸಿರುತ್ತಾರೆ.

ಪ್ರತಿವಾದಿ-1 ರಿಂದ 3 ರ ಪರ ವಕೀಲರು ಸದರಿ ವ್ಯಾಜ್ಯದ ಜಮೀನಿಗೆ ಸಂಬಂಧಿಸಿದಂತೆ ತಮ್ಮ ಲಿಖಿತ ವಾದವನ್ನು ದಿನಾಂಕ:18.11.2014 ರಂದು ತೆರೆದ ನ್ಯಾಯಾಲಯದಲ್ಲಿ ಸಲ್ಲಿಸಿದ್ದು, ಇವರ ಪ್ರಕಾರ ಸದರಿ ಮೇಲ್ಮನವಿಯು ಕಾನೂನು ಬಾಹಿರವಾಗಿದ್ದು, ಅಪೀಲುದಾರರು ಸುಳ್ಳು ಮಾಹಿತಿ ಮತ್ತು ಸೃಷ್ಟಿತ ದಾಖಲೆಗಳ ಆಧಾರದ ಮೇಲೆ ಸಲ್ಲಿಸಿದ್ದು, ಸದರಿ ಪ್ರಶ್ನಿತ ಆದೇಶವು ಕಾಲಮಿತಿ ಮೀರಿರುವುದರಿಂದ, ಹಾಗೂ ಪ್ರತಿವಾದಿ-1 ಮತ್ತು 2 ರವರು ಮರಣ ಹೊಂದಿದ್ದು, ಮರಣ ಹೊಂದಿದವರ ಮೇಲೆ ಸಲ್ಲಿಸಿರುವ ಸದರಿ ಮೇಲ್ಮನವಿಯನ್ನು ವಜಾಗೊಳಿಸಬೇಕಾಗಿ ವಿನಂತಿಸಿಕೊಂಡಿರುತ್ತರೆ.

ಸದರಿ ಜಮೀನು ಮೂಲತ: ಶ್ರೀಮತಿ ಬೂದನೂರು ಹನುಮವ್ವ ಗಂಡ ದಿ||ಕೊಟ್ರಪ್ಪ ಇವರ ಸ್ವಯಾರ್ಜಿತ ಆಸ್ತಿಯಾಗಿದ್ದು ಇವರು ನೋಂದಾಯಿತ ದಸ್ತಾವೇಜು ಸಂಖ್ಯೆ:452/69-70 ದಿನಾಂಕ:12.05.1969 ರಂದು ರೂ.4,000/- ಗಳಿಗೆ ಕ್ರಯಕ್ಕೆ ಪಡೆದಿದ್ದು, ಇವರಿಗೆ ಸಂತಾನವಿಲ್ಲದಿರುವುದರಿಂದ ಇವರ ತಂದೆ ಚೊಕ್ಕಪ್ಪ ಇವರಿಗೆ ಇಬ್ಬರು ಹೆಂಡತಿಯರಿದ್ದು, ಇವರುಗಳ ಮಕ್ಕಳಾದ ಗಿರಿಯಪ್ಪ ಇವರ ಮರಣಾನಂತರ ಇವರ ಸಹೋದರನಾದ ಅಂದರೆ ಬೂದನೂರು ಚೊಕ್ಕಪ್ಪನ ಗಂಡು ಮಕ್ಕಳಾದ ಗಿರಿಯಪ್ಪನ ಭಾಗವನ್ನು ಅವನ ಮಗನಾದ ಪ್ರೇಮಾನಂದ ಇವರಿಗೆ ಸದರಿ ವ್ಯಾಜ್ಯದ ಜಮೀನಿನನ ಪೈಕಿ ವಿಸ್ತೀರ್ಣ:01 ಎಕರೆ 00 ಸೆಂಟ್ಸ್; ಡಾಲಿಂಗಪ್ಪ ಮರಣ ಹೊಂದಿದ್ದರಿಂದ ಇವರ ಹೆಂಡತಿ ಹೇಮವ್ವ ಇವರಿಗೆ ವಿಸ್ತೀರ್ಣ:01 ಎಕರೆ 00 ಸೆಂಟ್ಸ್; 3ನೇ ಮಗ ಗಿರೀಶಪ್ಪನಿಗೆ ವಿಸ್ತೀರ್ಣ:00 ಎಕರೆ 92 ಸೆಂಟ್ಸ್; 4 ನೇ ಮಗ ಸಂಗಪ್ಪನಿಗೆ ವಿಸ್ತೀರ್ಣ:01 ಎಕರೆ 00 ಸೆಂಟ್ಸ್; ಎಂದು ವಾರಸತ್ವ ಹಾಗೂ ಒಪ್ಪಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿ ಪಾಲು ವಿಭಾಗ ಮಾಡಿಕೊಂಡಿರುತ್ತಾರೆಂದು, ಅಂದಿನಿಂದ ಈವರೆಗೂ ಅವರವರ ಪಾಲಿಗೆ ಬಂದ ಜಮೀನನ್ನು ಅವರೇ ಸಾಗುವಳಿ ಮಾಡುತ್ತಾ ಸ್ವಾಧೀನಾನುಭವವನ್ನು ಹೊಂದಿರುವುದಾಗಿ ಸದರಿ ವ್ಯಾಜ್ಯದ ಜಮಿನಿಗೆ ಸಂಬಂಧಿಸಿದಂತೆ ಹನುಮವ್ವ ಇವರು ಖರೀದಿಸಿದ ನೋಂದಾಯಿತ ಕ್ರಯ ಪತ್ರದ ನಕಲು, ವಂಶವೃಕ್ಷ, ಪಹಣಿ ಪತ್ರಿಕೆಗಳನ್ನು ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ. ಮೇಲ್ಮನವಿದಾರರು ದುರುದ್ದೇಶದಿಂದ ವಿಲ್ಲು ಪತ್ರವನ್ನು ಸೃಷ್ಟಿಸಿರುವುದಾಗಿ ಸದರಿ ಸೃಷ್ಟಿತ ವಿಲ್ಲಿನ ಆಧಾರದ ಮೇಲೆ ಹಕ್ಕನ್ನು ಕೋರಿರುವುದರಿಂದ, ಮಾನ್ಯ ನ್ಯಾಯಾಲಯಕ್ಕೆ ಸದರಿ ವಿಲ್ಲಿನ ಆಧಾರದ ಮೇಲೆ ಯಾವುದೇ ನಿರ್ಣಯವನ್ನು ತೆಗೆದುಕೊಳ್ಳುವ ಅಧಿಕಾರ ವಿಲ್ಲದಿರುವುದರಿಂದ ಸದರಿ ಮೇಲ್ಮನವಿಯನ್ನು ವಜಾಗೊಳಿಸಬೇಕೆಂದು ಮನವಿ ಮಾಡಿಕೊಂಡಿರುತ್ತಾರೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಲಾಗಿ, ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಲಾಗಿ ಹಾಗೂ ಪ್ರಕರಣದಲ್ಲಿಯ ದಾಖಲೆಗಳ ಆಧಾರದ ಮೇಲೆ, ವಿಲ್ ದಸ್ತಾವೇಜು ಪ್ರಕಾರ ಕ್ರಮ ವಹಿಸುವುದಕ್ಕೆ ಸಂಬಂಧಿಸಿದಂತೆ, ಮಾನ್ಯ ಉಚ್ಛ ನ್ಯಾಯಾಲಯ, ಕರ್ನಾಟಕಇವರಉಲ್ಲೇಖ(Citation): 2006 (3) KCCR 1980 ರಲ್ಲಿರಿಟ್ ಪಿಟಿಷನ್ ಸಂಖ್ಯೆ:47795/2001 (KLR), ದಿನಾಂಕ:05.06.2006 ರಂದುಅಪ್ಪಾಸಾಬ್ ಬಾಬಾಜಿದಬಾಡೆ ವಿರುದ್ದ ಜಿಲ್ಲಾಧಿಕಾರಿಗಳು, ಬೆಳಗಾಂ ಜಿಲ್ಲೆ ಮತ್ತು ಇತರರು ಪ್ರಕರಣದಲ್ಲಿ ನೀಡಿರುವ ಆದೇಶ ಹಾಗೂ ನಿರ್ದೇಶನಗಳನ್ವಯ ವಿವಾದಾಸ್ಪದ ವಿಲ್ಲಿಗೆ ಸಂಬಂಧಿಸಿದಂತೆ ಹಕ್ಕಿನ ಬಗ್ಗೆ ನಿರ್ಧರಿಸಲು ಸಿವಿಲ್ ನ್ಯಾಯಾಲಯಕ್ಕೆ ಮಾತ್ರ ಅಧಿಕಾರವಿರುವುದಾಗಿ ತಿಳಿಸಿರುತ್ತಾರೆ. ಆದುದರಿಂದ, ವಾದಿಯು ವಿಲ್ ದಸ್ತಾವೇಜಿಗೆ ಸಂಬಂಧಿಸಿದಂತೆ ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಲು ಹಾಗೂ ನೋಂದಾಯಿತವಲ್ಲದ ಪಾಲು ವಿಭಾಗ ಪತ್ರದ ಆಧಾರದ ಮೇಲೆ ಕ್ರಮ ಜರುಗಿಸಲು ಈ ನ್ಯಾಯಾಲಯದ ವ್ಯಾಪ್ತಿಗೆ ಬಾರದೇ ಇರುವುದರಿಂದ, ಪಾಲು ವಿಭಾಗ ಪತ್ರಕ್ಕೆ ಸಂಬಂಧಿಸಿದಂತೆ ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಲುಈ ಕೆಳಕಂಡಂತೆ

## -: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ **ಅಪೀಲನ್ನು ವಜಾಗೊಳಿಸುತ್ತಾ,** ಉಭಯ ಪಕ್ಷಗಾರರು ವಿಲ್ ದಸ್ತಾವೇಜು ಹಾಗೂ ಪಾಲು ವಿಭಾಗ ಪತ್ರಕ್ಕೆ ಸಂಬಂಧಿಸಿದಂತೆ ತಮ್ಮ ಹಕ್ಕನ್ನು ಸಾಬೀತುಪಡಿಸಿಕೊಳ್ಳಲು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿ ಪರಿಹಾರ ಕಂಡುಕೊಳ್ಳವಂತೆ ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:07.04.2016 ರಂದುತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

[ಅವಿನಾಶ್ ಮೆನನ್‌ರಾಜೇಂದ್ರನ್, ಭಾ.ಆ.ಸೇ]
ಸಹಾಯಕಆಯುಕ್ತರು,
ಹೊಸಪೇಟೆ.

ವಾದಿ : ಪ್ರತಿವಾದಿಗಳಿಗೆ

**ಪ್ರತಿಯನ್ನು:-**

1. ತಹಶೀಲ್ದಾರರು, ಹಗರಿಬೊಮ್ಮನಹಳ್ಳಿ ಇವರಿಗೆಸೂಕ್ತ ಕ್ರಮಕ್ಕಾಗಿ ರವಾನಿಸಿದೆ.

ರವಾನಿಸಲಾಗಿದೆ : 22/4/16
ಕ್ರಮಾಂಕ :
ದಿನಾಂಕ :